ಎರಡು ದಿವಸವೂ ನೀರು ಪೂರೈಸಲಾಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಆಲ್ಲಿ ಅಂತ ತೊಂದರೆ ಇಲ್ಲ. ಡೀಸೆಲ್ ಪಂಪುಸೆಟ್ ಇಟ್ಟು ನೀರು ಒದಗಿಸುವಂತ ವ್ಯವಸ್ಥೆ ಮಾಡಿದ್ದೇವೆ. ಬೆಂಗಳೂರಿನಲ್ಲಿ ಕೂಡ ಪ್ರತಿ ಬುಧವಾರ ನೀರು ಕೊಡುತ್ತಿಲ್ಲ. ಈಗ ಆಲ್ಲಿ ೧೧ ಕಿಲೋಮೀಟರ್ ಸ್ಪೆಷಲ್ ಲೈನು ಹಾಕಿಸಲಿಕ್ಕೆ ಹೆಚ್ಚಿನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಾವೂರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮುಂದಿನ ವ್ಯವಸ್ಥೆ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಡೀಸೆಲ್ ಪಂಪು ಕೆಟ್ಟುಹೋದಾಗ ಸರಿಪಡಿಸುತ್ತೇನೆಂದು ಹೇಳಿದರು. ಇನ್ನೂ ಅದನ್ನು ಸರಿಪಡಿಸಿರಲಿಲ್ಲ. ಪತ್ರಿಕಾಕರ್ತರನ್ನು ಕರೆದುಕೊಂಡು ಹೋಗಿದ್ದಾಗಲೂ ಕೂಡ ಇನ್ನು ರೆಡಿಯಾಗಿರಲಿಲ್ಲ. ಕಳೆದ ಮೂರು ನಾಲ್ಕು ವರ್ಷಗಳಿಂದ ಮಳೆ ಚೆನ್ನಾಗಿ ಆದರೂ ಕೂಡ ನೀರಿನ ತೊಂದರೆ ತಪ್ಪಿಲ್ಲ. ಕನಿಷ್ಟ ಧಾರವಾಡದಂತ ಪಂಹಾ ನಗರಕ್ಕೆ ಹಬ್ಬ ಹರಿದಿನಗಳಲ್ಲಾದರೂ ನೀರು ಪೂರೈಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್ —ಈಗ ಡೀಸೆಲ್ ಪಂಪ್ ದುರಸ್ತಿ ಮಾಡಿಸಿಕೊಡಲಾಗಿದೆ. ಈಗ ಅಂತ ಗಂಭೀರವಾದ ಪರಿಸ್ಥಿತಿ ಇಲ್ಲ. ಹಬ್ಬ ಹರಿದಿನಗಳಲ್ಲಿ ಕೂಡ ನೀರು ಸರಬರಾಜು ಮಾಡಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ.

ಶ್ರೀ ಬಾವೂರಾವ್ ದೇಶಪಾಂಡೆ.—ಇನ್ನು ಮುಂದಕ್ಕಾದರೂ ಖಾಯಂ ಆಗಿ ನೀರು ಕೊಡುವಂತ ವ್ಯವಸ್ಥೆ ಮಾಡುತ್ತೀರಾ ? ವಾರದಲ್ಲಿ ಎರಡು ದಿವಸ ನಿಲ್ಲಿಸುವುದನ್ನು ಸರಿಪಡಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಪ್ರಯತ್ನ ಮಾಡುತ್ತೇನೆ.

Class I & II officers working in P.W.D.

845 SRI G. BASAVANNAPPA (Holehonnur).—Will the Minister for Public Works be pleased to state :—

(a) the total number of Class-I and Class-II officers in P.W.D.

(b) out of them, number of Class-I and Class-II Officers belonging to SCs and STs :

(c) whether it is a fact that the hurdles in cadre and recruitment rules have come in the way of promoting SC/ST officials to Class-II and Class-I categories ;

(d) whether it is a fact that the minimum experience of 5 years for promotion from Class-II to Class-I has been prescribed under C & R Rules 1960 ;

(e) whether it is not a fact that the Board of Chief Engineers have recommended for the reduction of this 5 years minimum experience service to 3 years ;

(f) if so, number of SC and ST officers who have become eligible for promotion from Class III to Class II category and Class II to Class I category, respectively ?

SRI KAGODU THIMMAPPA (Minister for Public Works).—

(a) Class-I ... 338 (Technical)
Class-II ... 1287 (Technical & Non-technical)

(b) —

	Total	SC	ST
Class I Chief Engrs.	28	5	nil
(Group-A) Suptg. Engrs.	75	13	nil
Exe. Engrs.	230	15	6
	333	33	6
Class-II Asst. Exe. Engrs.	1250	68	17
(Group-B) Registrars.	37	nil	nil
	1287	68	17

(c) No difficulty is experienced in fulfilling the reservation quota for SC/STs. categories in so far as Class-II (Technical cadre *i.e.*, Asst. Executive Engineers), is concerned. As regards Class-II (non-technical) *i.e.*. Registrars), as there are no eligible candidates of 3 years of service in the cadre of Manager Grade-I, the quota could not be filled up. As regards the case of Asst. Exe. Engineers for promotion to the cadre of Executive Engineers, in view of the provision in the C & R Rules for a minimum of 5 years of service, the quota of only SCs. could not be fully covered even though the reservation quota in respect of STs. could be fully met.

(d) Yes.

(e) Yes.

(f) Does not arise as the recommendation of the Board of Chief Engineers for limiting the period for 3 years of service in respect of Asst. Executive Engineers of only SC/ST categories is under consideration of the Government.

ಶ್ರೀ ಕಾಗೋಡು ತಿಮ್ಮಪ್ಪ.—ಇಂಗ್ಲೀಷ್ ಪಟ್ಟಿಯಲ್ಲಿ ಒಂದು ತಿದ್ದುಪಡಿಯಾಗಬೇಕಾಗಿದೆ. ಕ್ಲಾಸ್ (೧) ೩೩೮ ಎಂದು ಇದೆ. ೩೩೩ ಅಂತ ಅದು ಇರಬೇಕು.

ಶ್ರೀ ಜಿ. ಬಸವಣ್ಣಪ್ಪ —ಸನ್ಮಾನ್ಯ ಅಧ್ಯಕ್ಷರೇ, ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್, ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನಿಮ್ನ ವರ್ಗದ ಅಧಿಕಾರಿಗಳಿಗೆ ಪ್ರೊಮೋಷನ್ ಕೊಡಬೇಕಾದರೆ, ೫ ವರ್ಷದ ಮಿತಿಯನ್ನು ಮೂರು ವರ್ಷಗಳಿಗೆ ಇಳಿಸಲಾಗಿದೆ. ಆದರೆ, ಇನ್ನೂ ಏತಕ್ಕೆ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದರಿಂದ ಹರಿಜನರಿ ಅನ್ಯಾಯ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾದ ರೇಟ್ ಕೊಟ್ಟಿಲ್ಲ ಕಳೆದ ವರ್ಷ ಮಾಡಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಯಿಂದ ಎಕ್ಸಿಕ್ಯೂಟೀವ್ ಇಂಜಿನಿಯರ್ ಹುದ್ದೆಗೆ ಬಡ್ತಿ ಕೊಡತಕ್ಕ ಸಂದರ್ಭದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳಿಗೆ ೫ ವರ್ಷ ಸರ್ವಿಸ್ ಆಗಿರಬೇಕೆಂದು ಸಿ ಆಂಡ್ ಆರ್ ನಲ್ಲಿ ಇರುವುದರಿಂದ ಹರಿಜನ ಗಿರಿಜನರಿಗೆ ಬಡ್ತಿ ಅವಕಾಶ ಸಿಗುವುದಿಲ್ಲ. ಇದನ್ನು ಮೂರು ವರ್ಷಗಳಿಗೆ ಇಳಿಸಬೇಕೆಂದು ಶಿಫಾರಸ್ಸು ಮಾಡಿದ್ದರು. ಈ

ಶಿಫಾರಸ್ಸುಗಳನ್ನು ಸರ್ಕಾರ ಪರಿಶೀಲನೆ ಮಾಡಿದೆ. ಜೊತೆಗೆ ಹರಿಜನ ಗಿರಿಜನ ಸಂಘದವರು ಮನವಿ ಕೊಟ್ಟಿದ್ದಾರೆ. ಮೂರು ವರ್ಷಕ್ಕೆ ಇಳಿಸಬೇಕೆಂದು ಸರ್ಕಾರ ನಿರ್ಣಯ ಮಾಡಿ ಲೋಕಸೇವಾ ಆಯೋಗದ ಒಪ್ಪಿಗೆಗೆ ಕಳುಹಿಸಲಾಗಿದೆ. ಅಲ್ಲಿಂದ ಬಂದಮೇಲೆ ಜಾರಿಗೆ ಕೊಡುತ್ತೇವೆ.

ಶ್ರೀ ಜಿ ಬಸವಣ್ಣಪ್ಪ.—ಲೋಕೋಪಯೋಗಿ ಮಂತ್ರಿಗಳ ಹೇಳಿಕೆ ಪ್ರಕಾರ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ೬ ಪರ್ಸೆಂಟ್ ಇದ್ದಾರೆ. ಅಸಿಸ್ಟೆಂಟ್ ಇಂಜಿನಿಯರ್ಸ್ ೫ ಪರ್ಸೆಂಟ್ ಇದ್ದಾರೆ. ಈ ಒಂದು ಬ್ಯಾಕ್‌ಲಾಗ್‌ನ್ನು ಎದಷ್ಟು ಬೇಗ ಸರಿಪಡಿಸುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಪ್ರೊಮೋಷನಲ್ ರಿಸರ್ವೇಷನ್ ವ್ಯವಸ್ಥೆ ಜಾರಿಗೆ ಬಂದಿದ್ದು ೩೦-೮-೭೯ರಲ್ಲಿ. ಅಸಿಸ್ಟೆಂಟ್ ಇಂಜಿನಿಯರ್ಸ್ ಪ್ರೊಮೋಷನ್‌ವರೆಗೆ ಇದನ್ನು ಮಾಡಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರುಗಳಿಂದ ಎಕ್ಸಿಕ್ಯೂಟೀವ್ ಇಂಜಿನಿಯರು ಗಳಾಗಿ ಪ್ರೊಮೋಷನ್ ಕೊಡುವಾಗ ೫ ವರ್ಷದ ಅವಧಿಯನ್ನು ೩ ವರ್ಷಕ್ಕೆ ಇಳಿಸಬೇಕೆಂದು ಸರ್ಕಾರ ನಿರ್ಧರಿಸಿದೆ. ಇದಕ್ಕೆ ಕಾನೂನನ್ನು ತಿದ್ದುಪಡಿ ಮಾಡಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ೫ ವರ್ಷದಿಂದ ೩ ವರ್ಷಕ್ಕೆ ತಗ್ಗಿಸಿದ್ದೀರಿ. ಈ ಪ್ರಾತಿನಿಧ್ಯವನ್ನು ಸರಿಪಡಿಸುತ್ತೇವೆಂದು ಹೇಳಿದ್ದಾರೆ ಮತ್ತು ಇನ್ನೂ ಒಂದು ಮಾತನ್ನು ಹೇಳಿದ್ದಾರೆ. ಆದೇನೆಂದರೆ ೩೦ನೇ ಆರ್ಟಿಕಲ್ ಪ್ರಕಾರ ನಿಯಮಾವಳಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಮಾಡುವುದು ನ್ಯಾಯ. ಆದರೆ ಎಕ್ಸಿಕ್ಯುಟಿವ್ ಆರ್ಡರ್ಸ್ ಮಾಡಿದರೆ ಅದು ತಪ್ಪಾಗುವುದಿಲ್ಲ. ಸುಪ್ರೀಂ ಕೋರ್ಟ್ ನವರು ತೀರ್ಪು ಕೊಟ್ಟಿದ್ದಾರೆ. ಎಕ್ಸಿಕ್ಯುಟಿವ್ ಆರ್ಡರ್ಸ್‌ನಿಂದ ಯಾವುದನ್ನು ಮಾಡಬೇಕೆಂದು ಮಾಡಿದ್ದೀರಿ, ಅದನ್ನು ಮಾಡಬೇಕು. ೩ ವರ್ಷ ಎಂದು ಮಾಡಿದರೂ ಸಾಕಷ್ಟು ಜನರು ಸಿಕ್ಕದಿದ್ದರೆ ೨ ವರ್ಷಕ್ಕೂ ಇಳಿಸಬಹುದು. ಅಥವಾ ಒಂದು ವರ್ಷಕ್ಕೂ ಇಳಿಸಬಹುದು. ಜೂನಿಯರ್ ಇಂಜಿನಿಯರ್ ಆಗಿ ೧೨-೧೩ ವರ್ಷದಿಂದ ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅಂಥವರಿಗೆ ನಿಯಮಾವಳಿಯನ್ನು ಸಡಿಲ ಮಾಡಬೇಕು ಅವರಿಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಾವು ಮನಸ್ಸು ಮಾಡಿರುವುದು ಶ್ಲಾಘನೀಯವಾದುದು ಆದ್ದರಿಂದ ಮೊದಲು ಎಕ್ಸಿಕ್ಯೂಟಿವ್ ಆರ್ಡರ್ಸ್‌ನಿಂದ ಪ್ರೊಮೋಷನ್ ಕೊಟ್ಟು ಆನಂತರ ರೂಲ್ಸ್ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ನಮ್ಮ ಇಲಾಖೆಯವರನ್ನೂ ಮತ್ತು ಕಾನೂನು ಇಲಾಖೆಯವರನ್ನೂ ಕರೆಸಿ ಪ್ರಸ್ತಾಪ ಮಾಡಿದ್ದೇನೆ. ಕಾನೂನು ಇಲಾಖೆಯವರು ಈಗಿರತಕ್ಕ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ಈ ರೂಲ್ಸ್‌ನ್ನು ತಿದ್ದುಪಡಿ ಮಾಡಬೇಕಾದರೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರನ್ನು ಕನ್ಸಲ್ಟ್ ಮಾಡಿ ರಾಜ್ಯಪಾಲರ ಅನುಮತಿಯನ್ನು ಪಡೆಯಬೇಕು. ತಾವು ಹೇಳಿದಂತೆ ಎಕ್ಸಿಕ್ಯೂಟಿವ್ ಆರ್ಡರ್ ಪ್ರಕಾರ ಮಾಡುವುದಕ್ಕೆ ಬರುತ್ತದೆಯೇ ಎಂಬುದನ್ನೂ ಕೂಡ ಪರಿಶೀಲಿಸಬೇಕಾಗುತ್ತದೆ. But legal opinion is not coming to that level. Still I am pursuing that matter.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳುವುದು ಸರಿ. ೩೦ನೇ ನಿಯಮಾವಳಿಯ ಪ್ರಕಾರ ಮಾಡಬಾರದೆಂದು ನಾನು ಹೇಳುವುದಿಲ್ಲ. ಎಲ್ಲ ಇಲಾಖೆಯವರೂ ಮಾಡಬೇಕಾಗುತ್ತದೆ ಮತ್ತು ಅದನ್ನು ಒಪ್ಪಿಕೊಂಡಿದ್ದಾರೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿದೆ. ನಿಮ್ಮ ಕಾನೂನು ತಜ್ಞರು ನಿಮಗೆ ಏನು ಅಭಿಪ್ರಾಯವನ್ನು ಕೊಟ್ಟಿರುವವರಿಗೆ ಸಾಕಷ್ಟು ಅನುಭವ ಇಲ್ಲದಿರಬಹುದು. ಅದು ನನಗೆ ಗೊತ್ತಿದೆ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಇರುವುದರಿಂದ ಇದನ್ನು ಪುನರ್‌ಪರಿಶೀಲಿಸಬೇಕಾಗುತ್ತದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ? ಕಾನೂನು ಇಲಾಖೆಯವರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನೆ ಕೂತುಕೊಳ್ಳುವುದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಹೇಳಿದ್ದನ್ನು ಒಪ್ಪಿಕೊಂಡು ಕೂತುಕೊಳ್ಳುವುದಕ್ಕೆ ನಾನು ಇಲ್ಲಿ ಮಂತ್ರಿಯಾಗಿಲ್ಲ. I have got certain discretions and wisdom. Defiritely I am going to do it, ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತವರು ಮಾಡಬೇಕಾಗಿತ್ತು. ಆದರೆ ಮಾಡುವುದಕ್ಕೆ ಆಗಲಿಲ್ಲ. ಈಗಿನ ಮುಖ್ಯಮಂತ್ರಿಗಳೂ ಇದನ್ನೇ ಮಾಡೋಣವೆಂದು ಒಪ್ಪಿದ್ದಾರೆ. ತಾವೂ ಒತ್ತಾಯ ಮಾಡಿದ್ದೀರಿ. ಅವರಿಗೆ ನ್ಯಾಯವನ್ನು ಒದಗಿಸಿ

ಕೊಡಬೇಕೆಂಬುದೂ ಗೊತ್ತಿದೆ. ಎಕ್ಸಿಕ್ಯೂಟಿವ್ ಆರ್ಡರ್ ಪ್ರಕಾರ ಮಾಡಂವುದಕ್ಕೆ ಸಾಧ್ಯ ಇದ್ದರೆ ಮಾಡಂತ್ತೇವೆ. ಆದರೆ ಸುಪ್ರೀಂ ಕೋರ್ಟ್ ತೀರ್ಪು ಇದೆಯೆಂದು ತಾವು ಹೇಳುತ್ತಿದ್ದೀರಿ. ಈ ಅಂತೆ ಕಂತೆ ಬೇಡ, ನಾನು ತರಿಸಂತ್ತೇನೆ, I am not totally rejecting the suggestion. I will examine the matter and if there is any possibility, I am definitely going to do it.

SRI C. M. ARUMUGHAM.—Under what category these Assistant Engineers Come ?

SRI KAGODU THIMMAPPA —They are below Class II officers. Within Class-II, there are A and B Grades.

SRI C. M. ARUMUGHAM.—Will the Hon. Minister give us the total number of Assistant Engineers in the State and out of them the number of Scheduled Castes ?

SRI KAGODU THIMMAPPA.—I do not have the information right now. I will furnish it to the hon. Member later on.

SRI C. M. ARUMUGHAM.—Do they promote the Assistant Engineers to the post of Assistant Executive Engineers or they recruit directly ?

ಶ್ರೀ ಕಾಗೋಡು ತಿಮ್ಮಪ್ಪ.—ಜೂನಿಯರ್ ಇಂಜಿನಿಯರ್ಸ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ಸ್ ೧೦೦ ಪರ್ಸೆಂಟ್ ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಲ್ಲಿ ಆಗಿದೆ ಅಂಥ ಕಡೆಗಳಲ್ಲಿ ರಿಸರ್ವೇಷನ್ ಪಾಲಿಸಿಯನ್ನು ಫಾಲೋ ಮಾಡಿದ್ದಾರೆ. ಜೂನಿಯರ್ ಇಂಜಿನಿಯರ್‌ನಿಂದ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಮಾಡುವಾಗ, ಮತ್ತು ಅಸಿಸ್ಟೆಂಟ್ ಇಂಜಿನಿಯರ್‌ನಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಮಾಡುವ ಕಾಲದಲ್ಲಿ ಪ್ರೊಮೋಷನ್ ಪ್ರಶ್ನೆ ಬರುತ್ತದೆ. ಪ್ರೊಮೋಷನ್ ರೋಸ್ಟರ್ ಜಾರಿಗೆ ಬಂದಿರುವುದು ೩೦-೮-೧೯೭೯ರಿಂದ ಈ ಆರ್ಡರ್ ಜಾರಿಗೆ ಬಂದಮೇಲೆ This reservation quota was fully met earlier.

ಶ್ರೀ ಎಂ. ಗಂಗಣ್ಣ —೨ನೇ ದರ್ಜೆ ಹುದ್ದೆಗೆ ಪ್ರೊಮೋಷನ್ ಕೊಡಬೇಕಾದರೆ ಕನಿಷ್ಟ ೫ ವರ್ಷ ಆ ಹುದ್ದೆಯಲ್ಲಿ ಸೇವೆ ಸಲ್ಲಿಸಿರಬೇಕೆಂದು ಇದೆ. ಇದು ಪ್ರೊಬೇಷನರಿ ಪೀರಿಯಡ್‌ನ್ನು ಸೇರಿಸಿಯೋ ಅಥವಾ ಅದನ್ನು ಬಿಟ್ಟೋ ?

SRI KAGODU THIMMAPPA.—As Assistant Engineer, he must put in minimum Service of Five years.

ಶ್ರೀ ಬಿ. ಲಕ್ಷ್ಮಣಯ್ಯ —ಅಸಿಸ್ಟೆಂಟ್ ಇಂಜಿನಿಯರ್‌ನಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರೊಮೋಷನ್ ಕೊಟ್ಟಿದ್ದೀವೆಂದು ತಾವು ಹೇಳಿದ್ದೀರಿ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಪೋಸ್ಟ್‌ಗಳು ೧೨೫೦ ಇವೆ. ಇದರಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ೬೮, ಪೆಡ್ಯೂಲ್ ಟ್ರೈಬ್ಸ್ ೧೭ ಇವೆ. ಈ ಬ್ಯಾಕ್‌ಲಾಗ್‌ನ್ನು ತುಂಬುವುದಕ್ಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್‌ಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಆದರೂ ಈ ಪರ್ಸಂಟೇಜ್ ಬರಲಿಲ್ಲ. ಹಾಗಾದರೆ ಇದನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಬ್ಯಾಕ್‌ಲಾಗನ್ನು ತುಂಬುದಕ್ಕೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ನಿಂದ ೨೫ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ನೇರವಾಗಿ ನೇಮಕಾತಿ ಮಾಡಲಾಗುತ್ತು. ಆಗ ಅದಕ್ಕೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಬಂತು. ಇದರಿಂದಾಗಿ ನಾವು ಮುಂದುವರಿಯಲಿಕ್ಕೇ ಸಾಧ್ಯವಾಗಲಿಲ್ಲ. ೧೯೭೧ರಿಂದ ಪ್ರೊಬೇಷನರಿ ಲಿಸ್ಟ್ ಮಾಡಿಲ್ಲ. ಆದ್ದರಿಂದ ತೊಂದರೆಯಾಗಿದೆ. ಈ ಮಧ್ಯೆ ಪಬ್ಲಿಕ್ ಸರ್ವೀಸ್ ಕಮಿಷನ್ ಮುಖಾಂತರವೂ, ೬೦ ಜನರನ್ನು ಸೇವೆಯಲ್ಲಿರುವವರನ್ನೂ ತೆಗೆದುಕೊಳ್ಳೋಣವೆಂದು

ಮಾಡಿದ್ದೇವೆ. ಅದೇ ರೀತಿ ಸೇವೆಯಲ್ಲಿರುವವರಿಂದ ಈಗಾಗಲೇ ಅರ್ಜಿಗಳನ್ನು ಕರೆದಿದ್ದೇವೆ. ಆದರಲ್ಲೂ ಒಂದು ತೊಂದರೆ ಏನಾಗಿದೆ ಎಂದರೆ. ಬ್ಯಾಕ್‌ಲಾರ್ಡ್ ಕ್ಲಾಸ್‌ಗೆ ೧೦ ಸಾವಿರ ರೂ.ವರೆಗೆ ವರಮಾನದ ಮಿತಿ ಇದೆ. ಆದರೆ ಈ ಕಂಡೀಷನ್‌ನ್ನು ನಾವು ಹಾಕಿದರೆ ಸೇವೆಯಲ್ಲಿರುವವರು ಒಬ್ಬರೂ ಬರುವುದಿಲ್ಲ. ಇದನ್ನು ಪರಿಶೀಲಿಸಿ ಅವರ ಕುಟುಂಬದ ವರಮಾನವನ್ನು ತೆಗೆದುಕೊಳ್ಳೋಣ ಎಂದು ಅಭಿಪ್ರಾಯ ಪಟ್ಟಿದ್ದೇವೆ ಆನಂತರ ಪಿ.ಎಸ್.ಸಿಯವರನ್ನು ಕೇಳಿದಾಗ ಈಗಿರತಕ್ಕವರಲ್ಲೇ ಮಾಡಬಹುದೆಂದು ಹೇಳಿದರು ಆದ್ದರಿಂದ ಸೇವೆಯಲ್ಲಿರುವವರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಡೈರೆಕ್ಟ್ ರಿಕ್ರೂಟ್‌ಮೆಂಟ್‌ನಲ್ಲಿ ೧೦೦ ಜನರನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ಹಿಂದೆ ಇದ್ದ ರೂಲ್ಸ್‌ನಲ್ಲಿ ಅವರ ಎಕ್ಸ್‌ಪೀರಿಯನ್ಸ್ ಸರ್ಟಿಫಿಕೇಟನ್ನು ಕೇಳುತ್ತೇವೆ. ಆದರೆ ಅನೇಕ ಸಂದರ್ಭಗಳಲ್ಲಿ ಬೋಗಸ್ ಎಕ್ಸ್‌ಪೀರಿಯನ್ಸ್ ಸರ್ಟಿಫಿಕೇಟನ್ನು ತರುತ್ತಾರೆ. ಈ ಸರ್ಟಿಫಿಕೇಟನ್ನು ಇಂಥವರೇ ಕೊಡಬೇಕೆಂದು ಇಲ್ಲಿ ಎಲ್ಲೂ ನಮೂದು ಮಾಡಿಲ್ಲ. ಈಗ ಕೆಲವರು ಎಕ್ಸ್‌ಪೀರಿಯನ್ಸ್ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ, ಇನ್ನೂ ಕೆಲವರು ಕೊಟ್ಟಿಲ್ಲ. ಆದ್ದರಿಂದ ನಾವು ಇದರ ಬಗ್ಗೆ ಏನೂ ಮಾಡುವುದಕ್ಕಾಗುತ್ತಿಲ್ಲವೆಂದು ಪಿ. ಎಸ್.ಸಿ.ಯವರಂ ಹೇಳಿದ್ದಾರೆ. ಆನಂತರ ನಾವು ಸರ್ಕಾರದಲ್ಲಿ ಚರ್ಚೆಮಾಡಿ ೭೦.ಬಿ.ಬಿ.ಎಸ್. ಆದಮೇಲೆ ಹೌಸ್ ಸರ್ಜನ್‌ಷಿಪ್ ಅಂತ ಒಂದು ಕೋರ್ಸ್‌ನ್ನು ಇಟ್ಟಿದ್ದೇವೆ,ಆದರೆ ಬಿ.ಇ. ಆದವರಿಗೆ ಅಂಥ ರೆಕ್ಗ್ನೈಸ್ ಕೋರ್ಸ್ ಯಾವುದೂ ಇಲ್ಲ. ಅದು ಇಲ್ಲದಿರುವುದರಿಂದ ನಾವು ಎಕ್ಸ್‌ಪೀರಿಯನ್ಸ್ ಸರ್ಟಿಫಿಕೇಟ್‌ನ್ನು ಕೇಳುವುದು ಅನಾವಶ್ಯಕವಾಗುತ್ತದೆ. ಆದ್ದರಿಂದ ಇದನ್ನು ತಿದ್ದುಪಡಿ ಮಾಡಬೇಕೆಂದು ನಾವು ಹೇಳಿದ್ದೇವೆ ಅದು ಬಂದಕೂಡಲೇ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ನೇರವಾಗಿ ನಾವು ತುಂಬುಪುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಂದು ವಿಚಾರ ಎಂದರೆ ಪ್ರೊಮೋಷನ್ ರೋಸ್ಟರ್ ಜಾರಿಗೆ ಬಂದಮೇಲೆ ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾಗಿ ಪ್ರೊಮೋಷನ್ ಮಾಡಿರುವುದು ವಿಳಿ. ಇದರಲ್ಲಿ ೩೧ ಪೋಸ್ಟ್ ಪೆಡ್ಯೂಲ್ಡ್ ಕ್ಯಾಸ್ಟನವರಿಗೆ ಹೋಗಬೇಕಾಗಿತ್ತು, ೯ ಎಸ್ ಟಿಗೆ ಹೀಗಬೇಕಾಗಿತ್ತು. ಅದರ ಪೈಕಿ ಎಸ್.ಸಿ.ಗೆ ೧೦, ನುತ್ತು ಎಸ್. ಟಿ.ಗೆ ೯ ಹುದ್ದೆಗಳು ಹೋಗಿವೆ ಆದೇರೀತಿ ಅಸಿಸ್ಟೆಂಟ್ ಇಂಜಿನಿಯರ್‌ಗಳಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರೊಮೋಷನ್ ಕೊಟ್ಟಿರುವುದರಲ್ಲಿ ೩೬. ಇದರಲ್ಲಿ ಎಸ್ ಸಿ.ಗೆ ೫೬ ಮತ್ತು ಎಸ್.ಟಿ ಗೆ ೧೨ ಹೋಗಬೇಕಾಗಿತ್ತು. ಆದರೆ ಎಸ್.ಸಿ ಗೆ ೫೬ ಮತ್ತು ಎಸ್.ಟಿ.ಗೆ ೧೨ ಹೋಗಿದೆ. ಜೂನಿಯರ್ ಇಂಜಿನಿಯರ್‌ನಿಂದ ಅಸಿಸ್ಟೆಂಟ್ ಇಂಜಿನಿಯರ್‌ಗೆ ೧೦೬ ಜನರನ್ನು ಪ್ರಮೋಟ್ ಮಾಡಿದ್ದೇವೆ. ಆದರಲ್ಲಿ ಎಸ್.ಸಿ.ಗೆ ೧೬ ಮತ್ತು ಎಸ್.ಟಿ.ಗೆ ೪ ಹೋಗ ಬೇಕಾಗಿತ್ತು. ಅದರ ಪ್ರಕಾರವೇ ಕೊಟ್ಟಿದ್ದೇವೆ. ಅಂದರೆ ಇದರಲ್ಲಿ ಯಾವುದನ್ನೂ ಕಡಿಮೆ ಮಾಡಿಲ್ಲ.

ಜೂನಿಯರ್ ಇಂಜಿನಿಯರಿಂದ ಅಸಿಸ್ಟೆಂಟ್ ಎಗ್ಜಿಕ್ಯೂಟಿವ್ ಇಂಜಿನಿಯರ್‌ಗೆ ೧೦೬ ಪೋಸ್ಟ್‌ಗಳಿಗೆ ಪ್ರಮೋಷನ್ ಮಾಡಬೇಕಾಗಿತ್ತು. ಅದರಲ್ಲಿ ೧೬ ಎಸ್‌ಸಿ, ೪ ಎಸ್.ಟಿ. ಇದ್ದಾರೆ. ಇದರಿಂದ ಇದರಲ್ಲಿ ಏನು ಶಾರ್ಟೇಜ್ ಇಲ್ಲ.

ಶ್ರೀ ಎಸ್.ಎಸ್. ಆರಕೇರಿ.—ಸನ್ಮಾನ್ಯ ಮಂತ್ರಿಗಳವರು ಮಾತನಾಡುತ್ತಾ ಇದರ ಬಗ್ಗೆ ತಮಗೂ ಕೂಡ ಕಳಕಳಿ ಇದೆಯೆಂದು ತಿಳಿಸಿದರು.ಆದಂದರಿಂದ ಕಾನೂನಿನ ತೊಡಕೇನಿರಲಿ ಮತ್ತೆ ಇನ್ನು ಯಾವುದೇ ತೊಡಕು ಇರಲಿ ಮಾಡಬೇಕು ಎನ್ನತಕ್ಕ ಮನಸ್ಸು ಮಾನ್ಯ ಸಚಿವರಿಗೆ ಇರುವುದರಿಂದ ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಮತ್ತೆ ೫ ವರ್ಷ ಎಂದು ಏನಿದೆ, ಅದನ್ನು ೩ ವರ್ಷ ಎಂದು ಆರ್ಡರ್ ಮಾಡಿ ಪ್ರಮೋಷನ್ ಕೊಟ್ಟು ಬಿಡಿ, ಆ ಮೇಲೆ ಏನಾದರೂ ಕಾನೂನಿನ ತೊಡಕು ಇದ್ದರೆ ಅದನ್ನು ಸರಿಮಾಡೋಣ, ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಏನೇ ಮಾಡುವಾಗ ಕಾನೂನು ಬಾಹಿರವಾಗಿ ಮಾಡುವುದಕ್ಕೆ ಬರುವುದಿಲ್ಲ, ಹಾಗೆ ಪ್ರಮೋಷನ್ ಕೊಟ್ಟರೂ ಪ್ರಯೋಜನವಿಲ್ಲ. ನಿನ್ನೆ ಕೂಡ ನಾನು ಇದರ ಬಗ್ಗೆ ಚರ್ಚೆ ಮಾಡಿ ಇನ್ನು ಒಂದು ವಾರದೊಳಗೆ ಮಾಡುವುದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇನೆ. ಅದಕೋಸ್ಕರವಾಗಿ ಕಾನ್‌ಫಿಡೆನ್ಸಿಯಲ್ ರಿಪೋರ್ಟ್‌ನ್ನು ಕೂಡ ಈಗಾಗಲೇ ತರಿಸಿಕೊಂಡಿದ್ದೇನೆ. ಎಷ್ಟು ಜನ ೩ ವರ್ಷದೊಳಗಿನವರು ಸಿಗುತ್ತಾರೆ? ಎಷ್ಟು ಜನ ೫ ವರ್ಷದೊಳಗಿನವರು ಸಿಗುತ್ತಾರೆ ಎನ್ನುವ ಬಗ್ಗೆ ಲೀಸ್ಟ್‌ನ್ನು ತರಿಸಿದ್ದೇನೆ. ಅದನ್ನು ಇನ್ನು ಒಂದೆರಡು ವಾರದಲ್ಲಿ ಪೂರೈಸಬೇಕೆಂದಿದ್ದೇನೆ ಆದುದರಿಂದ ನಿಮಗೆ ಎಷ್ಟು ಕಾತುರತೆ ಇದೆಯೋ ಅಷ್ಟೇ ಕಾತುರತೆ ನಮಗೂ ಕೂಡ ಇದೆ. ಖಂಡಿತ ಪಾಗಿಯೂ ನಿಮ್ಮ ಮನಸ್ಸಿನಲ್ಲಿರುವ ಪ್ರಕಾರವಾಗಿ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.